ಬೆಳೆದವರು ಪ್ರೀತಿ. ಮಾನಸಿಕ ಸಮಸ್ಯೆ ಇರುವವರು ಆಸ್ಪತ್ರೆಗೆ ಬಂದು ಹುಷಾರಾಗಿ ಹೋಗುವುದನ್ನು ಬೆರಗಿನಿಂದ ನೋಡುತ್ತಿದ್ದ ಅವರೀಗ, ಅಪ್ಪನ ಸ್ಥಾನದಲ್ಲಿ ನಿಂತು ಸಾಂತ್ವನ ಹಂಚುವ ಕೆಲಸ ಮಾಡುತ್ತಿದ್ದಾರೆ.

‘ಶಿವಮೊಗ್ಗದಂತಹ ಗ್ರಾಮೀಣ ಚಹರೆ ಉಳಿಸಿಕೊಂಡಂತರ ನಗರ ಪ್ರದೇಶದಲ್ಲಿ ಮನಃಶಾಸ್ತ್ರ ಎಂಬ ಪರಿಕಲ್ಪನೆಯ ಬಗ್ಗೆ ಜನರಿಗೆ ಹೆಚ್ಚಿನ ಅರಿವಿಲ್ಲ. ಜಾತಿ, ಪಿತೃಪ್ರಧಾನ ವ್ಯವಸ್ಥೆಯ ನೂರಾರು ಸಮಸ್ಯೆಗಳು ನಡುವೆಯೂ ಮಾನಸಿಕ ಕ್ಷೋಭೆಗಳಾದವರನ್ನು ತವಕ ತಲ್ಲಣಗಳನ್ನು ಸಾವಧಾನದಿಂದ ಆಲಿಸುವ ಪ್ರೀತಿ, ತುಂಬ ಪ್ರಬುದ್ಧ ವ್ಯಕ್ತಿ’ ಎನ್ನುವುದು ‘ಮಾನಸ ಟ್ರಸ್ಟ್’ ಸಂಸ್ಥೆಯ ಸಂಶೋಧನಾ ವಿಭಾಗದಲ್ಲಿ ತೊಡಗಿಸಿಕೊಂಡಿರುವ ಡಾ. ರಾಜೇಂದ್ರ ಚೆನ್ನಿ ಅನಿಸಿಕೆ.

ಪ್ರೀತಿ ಅವರದು ಬಹುಮುಖ ವ್ಯಕ್ತಿತ್ವ. ಭರತನಾಟ್ಯ ಪಟು, ಸೈಕ್ಲಿಂಗ್‌ನಲ್ಲಿ ಆಸಕ್ತಿ, ಓದುಗುಳಿ – ಇವೆಲ್ಲವೂ ಅವರ ವ್ಯಕ್ತಿತ್ವದ ಮೆರುಗು ಹೆಚ್ಚಿಸಿವೆ. ತಮ್ಮ ಸಂಶೋಧನೆ, ಅಧ್ಯಯನ, ಗಳಿಸಿದ ಜ್ಞಾನ – ಎಲ್ಲವೂ ಜನೋಪಯೋಗಿ ಆಗಿರಬೇಕು ಎನ್ನುವುದು ಅವರ ಉದ್ದೇಶ. ಈ ನಿಟ್ಟಿನಲ್ಲೇ ಅವರು, ‘ಮಾನಸ ಸೆಂಟರ್ ಫಾರ್ ಕಲ್ಚರಲ್ ಸ್ಟಡೀಸ್’, ಕಲಿಕಾ ನ್ಯೂನತೆ ಇರುವ ಮಕ್ಕಳಿಗೆ ನೆರವಾಗುವ ‘ಮನಸ್ಫೂರ್ತಿ’, ‘ಕೌನ್ಸೆಲಿಂಗ್ ಎಜುಕೇಶನ್ ಫೌಂಡೇಶನ್’, ‘ಮಾನಸ ಆರ್ಟ್ಸ್’ ಮುಂತಾದ ಕವಲುಗಳನ್ನು ‘ಮಾನಸ ಟ್ರಸ್ಟ್’ಗೆ ಸೇರಿಸಿದ್ದಾರೆ.

ಪ್ರೀತಿ ಅವರ ಎಲ್ಲ ಕೆಲಸಗಳ ಕೇಂದ್ರದಲ್ಲಿರುವುದು ಮಕ್ಕಳು ಮತ್ತು ಯುವಜನತೆ. ಗ್ರಾಮೀಣ ಪ್ರದೇಶದ ಜನರನ್ನು ಆದಷ್ಟು ಹೆಚ್ಚು ತಲುಪುವ ನಿಟ್ಟಿನಲ್ಲಿ ಅವರ ಪ್ರಯತ್ನ ಸಾಗುತ್ತಿದೆ. **manasanursinghome.org** ವೆಬ್‌ಸೈಟ್‌ನಲ್ಲಿ ಅವರ ಕುರಿತ ಹೆಚ್ಚಿನ ವಿವರಗಳು ಲಭ್ಯ.

## ಬಿ. ಶೈಲಜಾ



**60–70** ಮನೆಗಳ ಪುಟ್ಟ ಹಳ್ಳಿ ನೆಲಮಂಗಲ ತಾಲ್ಲೂಕಿನ ಡಾಬಸ್‌ಪೇಟೆ ಹೋಬಳಿಯ ಅಯ್ಯನತೋಟ. ಅಲ್ಲಿನ ಎಲ್ಲರೂ ಕೃಷಿಕರು, ಬಹುತೇಕರು ಅನಕ್ಷರಸ್ಥರು. ಈ ಗ್ರಾಮದ ಪ್ರಾಥಮಿಕ ಶಾಲೆಗೆ ಶಿಕ್ಷಕಿಯಾಗಿ ಬಂದ ಬಿ. ಶೈಲಜಾ ‘ಅಕ್ಷರ ಕ್ರಾಂತಿ’ ಮೊಳಗಿಸಿದರು ಎಂದರೆ ಅತಿಶಯವಲ್ಲ. ಈ ಸಾಧನೆ ಅವರಿಗೆ ತಾಲ್ಲೂಕು ಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದವರೆಗೆ ‘ಅತ್ಯುತ್ತಮ ಶಿಕ್ಷಕಿ’ ಪ್ರಶಸ್ತಿ ದೊರೆಕಿಸಿಕೊಟ್ಟಿದೆ. ಪ್ರಶಸ್ತಿಗಳ ಪ್ರಭೆಯ ಜೊತೆಗೆ ಅವರ ಚಟುವಟಿಕೆಗಳೂ ವಿಸ್ತರಿಸಿವೆ. ಪ್ರಸ್ತುತ ಡಾಬಸ್‌ಪೇಟೆ ಹೋಬಳಿಯ ಗೋವಿಂದಪುರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶೈಲಜಾ ಕೆಲಸ ಮಾಡುತ್ತಿದ್ದಾರೆ.

27 ವರ್ಷಗಳಿಂದ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಿರುವ ಶೈಲಜಾ, 24 ವರ್ಷ ಅಯ್ಯನತೋಟದಲ್ಲಿಯೇ ಕೆಲಸ ಮಾಡಿದ್ದಾರೆ. ಶಿಕ್ಷಕಿಯಾಗಿ ವೃತ್ತಿ ಆರಂಭಿಸಿದ್ದು ಈ ಗ್ರಾಮದಿಂದಲೇ. ಈ ತೋಟದಿಂದ ಎರಡು ಕಿಲೋ ಮೀಟರ್ ದೂರದ ಬೊಮ್ಮಲಿಂಗನಪಾಳ್ಯ ಅವರ ಸ್ವಗ್ರಾಮ.

‘ನನ್ನ ಕೆಲಸಗಳಿಗೆ ಸ್ಫೂರ್ತಿ ನನ್ನ ತಂದೆ ಭೀಮಯ್ಯ. ಅವರು ಸಹ ಶಿಕ್ಷಕರಾಗಿದ್ದರು. ತಮ್ಮ ನಾಲ್ಕು ಮಕ್ಕಳಿಗೂ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿದರು. ಅಸಹಾಯಕರು, ಬಡ ಮಕ್ಕಳ ಶಿಕ್ಷಣಕ್ಕೆ ಕೆಲಸ ಮಾಡಿದರು. ನಾನೂ ಅವರ ವಿದ್ಯಾರ್ಥಿ’ ಎನ್ನುವ ಶೈಲಜಾ ಎಂದಿಗೂ ಪ್ರಶಸ್ತಿಗಾಗಿ ಕೆಲಸ ಮಾಡಿದವರಲ್ಲ. ಅವರ ಕೆಲಸಕ್ಕಾಗಿ ಗೌರವಗಳು ಹುಡುಕಿಕೊಂಡು ಬಂದಿವೆ.

‘ಅಕ್ಷರ ಬೆಳಕು ಕಾರ್ಯಕ್ರಮದ ಜವಾಬ್ದಾರಿಯನ್ನು ಶಿಕ್ಷಕರಿಗೆ ವಹಿಸಲಾಗಿತ್ತು. ಮಕ್ಕಳಿಗೆ ಅಕ್ಕಿ ನೀಡಿದಾಗ ಅವರ ಪೋಷಕರು ಬಂದು ಹೆಬ್ಬೆಟ್ಟು ಒತ್ತುತ್ತಿದ್ದರು. ನೀವು ಸಹಿ ಮಾಡುವಷ್ಟು ಶಿಕ್ಷಣ ಕಲಿಯಬೇಕು ಎಂದಾಗ ಹಳ್ಳಿ ಭಾಷೆಯಲ್ಲಿ ನನಗೆ ಬೈದರು. ಆದರೆ ಅವರಿಗೆ ಅಕ್ಷರದ ಬಗ್ಗೆ ತಿಳಿ ಹೇಳಿದೆ. ಕಲಿಯಲು ಮುಂದೆ ಬಂದರು’ ಎಂದು ಶೈಲಜಾ ಊರಿನೊಂದಿಗಿನ ಒಡನಾಟ ನೆನಪಿಸಿಕೊಳ್ಳುತ್ತಾರೆ.

ಸಮುದಾಯದ ಸಹಕಾರದಲ್ಲಿ ಶಾಲೆಯನ್ನು ಶೈಲಜಾ ಭೌತಿಕವಾಗಿ ಅಭಿವೃದ್ಧಿಗೊಳಿಸಿದ್ದಾರೆ. ಕಟ್ಟಡ ಮಾತ್ರವಲ್ಲ – ಆಟದ ಮೈದಾನ, ಬಿಸಿಯೂಟಕ್ಕೆ ಶಾಲಾ ವನ, ಶೌಚಾಲಯವನ್ನು ದಾನಿಗಳ ನೆರವಿನಿಂದ ನಿರ್ಮಿಸಿದ್ದಾರೆ.

‘ಶಿಕ್ಷಕರ ಸಮಯ ಬೆಳಿಗ್ಗೆ 10ಕ್ಕೆ ಶಾಲೆಗೆ ಬಂದು ಸಂಜೆಯವರೆಗೂ ಪಾಠ ಮಾಡಿ ಹೋಗುವುದು ಎನ್ನುವ ಭಾವನೆ ಇದೆ. ನನ್ನ ವೃತ್ತಿ ಜೀವನದಲ್ಲಿ ಈ ಕಾಲಮಿತಿ ಇಲ್ಲ. ಎಷ್ಟೋ ರಾತ್ರಿ ಶಾಲೆಗಳಲ್ಲಿ ಉಳಿದಿರುವುದೂ ಇದೆ’ ಎನ್ನುವ ಅವರ ಮಾದರಿ ಕೆಲಸ ಗೋವಿಂದಪುರದಲ್ಲಿಯೂ ಮುಂದುವರಿದಿದೆ.

## ರೂಪಾ ನಾಗೇನಹಳ್ಳಿ

ಅಮ್ಮ, ಚಿಕ್ಕಮ್ಮ, ದೊಡ್ಡಮ್ಮ ಎಲ್ಲರೂ ದೇವದಾಸಿಯರೇ. ಓದು, ಬರಹ, ಒಳ್ಳೆಯ ಉದ್ಯೋಗ ಮತ್ತು ಬದುಕು ಕನಸಾಗಿಯೇ ಉಳಿಯಬಹುದು ಎಂಬ ಆತಂಕದಲ್ಲಿದ್ದ ಹುಡುಗಿ, 7ನೇ ಕ್ಲಾಸಿಗೆ ಶಾಲೆ ಬಿಟ್ಟು, ಆರು ವರ್ಷ ಗಣಿ ಕೂಲಿಯಾಗಿ ಕೆಲಸ ಮಾಡಿದ್ದ ಹುಡುಗಿ ಈಗ ಅಜೀಂ ಪ್ರೇಂ ಜೀ ಫೌಂಡೇಶನ್‌ನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿನಿ.

ರೂಪಾ ನಾಗೇನಹಳ್ಳಿ ಎಂ.ಎ ಓದಲು ಬೆಂಗಳೂರಿಗೆ ಹೋಗುವ ಬಗ್ಗೆ ಹತ್ತು ವರ್ಷದ ಹಿಂದೆ ಕನಸು ಕಾಣಲೂ ಸಾಧ್ಯವಿರಲಿಲ್ಲ. ಆದರೆ ಹಠ, ಶ್ರದ್ಧೆ, ಬದ್ಧತೆ ಅಲ್ಲಿವರೆಗೂ ಕರೆದೊಯ್ದಿದೆ. ದೇವದಾಸಿಯರ ಮಕ್ಕಳ ಏಳ್ಗೆಗಾಗಿ ಹೊಸಪೇಟೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ‘ಸಖಿ’ ಸಂಸ್ಥೆ ರೂಪಾ ಅವರಂಥ ಹಲವು ಹೆಣ್ಣುಮಕ್ಕಳ ಬೆನ್ನಿಗೆ ನಿಲ್ಲದೇ ಹೋಗಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ.

ದೇವದಾಸಿಯರ ಮಕ್ಕಳು ದೇವದಾಸಿಯರೇ ಆಗಬೇಕಿಲ್ಲ ಎಂಬುದು, ರೂಪಾ ಸಮಾಜಕ್ಕೆ ಕಲಿಸಲು ಹೊರಟಿರುವ ಹೊಸ ಪಾಠ. ನಾಗೇನಹಳ್ಳಿ, ಹೊಸಪೇಟೆ ನಗರದ ಹೊರಗಿರುವ ಹಳ್ಳಿ. ರೂಪಾ ತಾಯಿ ತವರೂರು ಗಂಗಾವತಿ.

ಅಮ್ಮನೊಂದಿಗೆ ಬರುತ್ತಿದ್ದ ಅಪ್ಪಂದಿರು ಹಿಂಸಾಪ್ರಿಯರು. ನೆರೆಹೊರೆಯಲ್ಲಿ ಅಮ್ಮನಿಗೆ ಉಸಿರುಗಟ್ಟುವ ವಾತಾವರಣ. ಅವಳ ಗೈರಿನಲ್ಲಿ ಮನೆ ಮುಂದೆ ಠಳಾಯಿಸುವ ಪುಂಡಪೋಕರಿಗಳ ನಡುವೆ ತೊಟ್ಟಿಲ ಮಗುವಾದ ತಮ್ಮನನ್ನು ನೋಡಿಕೊಳ್ಳುವ ಹೊಣೆ.

ಅಪ್ಪಂದಿರ ಹೆಸರು ಬದಲಾದ ಕಾರಣಕ್ಕೆ ಶಿಕ್ಷಣಕ್ಕೂ ಅಡಚಣೆ. ಮೊದಲ ಅಪ್ಪನು ಅಮ್ಮ ಹುಲಿಗೆಮ್ಮನ ಹೆಸರನ್ನು ಉಷಾ ಎಂದು ಬದಲಿಸಿದ್ದು ಇನ್ನೊಂದು ಸಮಸ್ಯೆ. ಗಣಿಗಾರಿಕೆ ನಡೆಯುತ್ತಿದ್ದ ಸ್ಥಳದಲ್ಲಿ ಗುಡಿಸಲು ಹಾಕಿಕೊಂಡು ಅದಿರು ಕಲ್ಲು ಆಯುವ ಕೂಲಿ ಕೆಲಸವನ್ನೂ ಮಾಡಿದ್ದಾಯಿತು. ಹಸಿವು, ಅವಮಾನ, ಅಭದ್ರತೆ, ಕಣ್ಣೀರ ನಡುವೆ ಕಾಣಿಸಿದ್ದು ಸಖಿ ಸಂಸ್ಥೆ. ಅಲ್ಲಿಗೆ ಹೆಜ್ಜೆ ಇಟ್ಟ ಬಳಿಕ ಬದಲಾಯ್ತು ಬದುಕು.

